ಕರ್ನಾಟಕವನ್ನು ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡುವ ಬಗ್ಗೆ

1117 ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007ರೊಳಗಾಗಿ ಬಾಲ ಕಾರ್ಮಿಕ ಮತ್ತು ರಾಜ್ಯವನ್ನಾಗಿ ಮಾಡುವುದಾಗಿ ಕಾರ್ಮಿಕ ಇಲಾಖೆಯು 2002ರ ಬಾಲ ಕಾರ್ಮಿಕರ ಪದ್ಧತಿ ಕ್ರಿಯಾ ಯೋಜನೆಯಲ್ಲಿ ಘೋಷಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ 2002ನೇ ಇಸವಿಯ ಕ್ರಿಯಾ ಯೋಜನೆಯಲ್ಲಿನ ಲೋಪದೋಷಗಳನ್ನು ಪತ್ತೆ ಹಚ್ಚಲಾಗಿದೆಯೇ;

ಇ) ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡುವ ಯೋಜನೆ 2010ಕ್ಕೆ ಮುಂದೂಡಲ್ಪಟ್ಟಿದ್ದು ತಿಳಿದಿದೆಯೇ;

ಈ) ಸದರಿ ಯೋಜನೆಗೆ ಸೂಕ್ತ ಅನುದಾನ ಬಿಡುಗಡೆ ಮಾಡಲಾಗಿದೆಯೇ; (ವಿವರ ನೀಡುವುದು)

ಉ) ಬಾಲ ಕಾರ್ಮಿಕ ಪದ್ಧತಿಯನ್ನು ತೆಗೆದು ಹಾಕಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು?

ಶ್ರೀ ಬಿ.ಎನ್. ಬಚ್ಚೇಗೌಡ (ಮಾನ್ಯ ಕಾರ್ಮಿಕ ಸಚಿವರು):

ಅ) ಹೌದು.

ಆ) ಕರ್ನಾಟಕ ಸರ್ಕಾರವು ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಿದ್ದು, ಅದನ್ನು ಕಾರ್ಯಗತ ಮಾಡುತ್ತಿದೆ. ಈ ಕ್ರಿಯಾ ಯೋಜನೆಯ ಮಧ್ಯಂತರ ಅರ್ಹತೆ ನಿರ್ಣಯಿಸುವ ಮಾರ್ಪಾಡು ಕಾರ್ಯವನ್ನು Institute of Socio Economic Change (ISEC) ಸಂಸ್ಥೆಯು ಮಾಡಿದ್ದು. ಈ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ. ಕ್ರಿಯಾ ಯೋಜನೆಯನ್ನು ಮಾರ್ಪಾಡು ಮಾಡಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಆದ್ದರಿಂದ, ನೂತನ ಕ್ರಿಯಾ ಯೋಜನೆ ರೂಪಿಸಿ, ಕರ್ನಾಟಕ ರಾಜ್ಯ ಬಾಲ ಕಾರ್ಮಿಕ ಮುಕ್ತ' ರಾಜ್ಯವನ್ನಾಗಿಸಲು ಸಾಧ್ಯವಾದ ಎಲ್ಲಾ ಕ್ರಮ ಕೈಗೊಳ್ಳಲಾಗುವುದು.

ಇ) ತಿಳಿಸಿದೆ. ಭಾರತ ಸರ್ಕಾರವು ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ, 12ನೇ ಪಂಚ ವಾರ್ಷಿಕ ಅವಧಿ ಅಂದರೆ 2007–08 ರಿಂದ 2011–12ನೇ ಸಾಲಿನವರೆಗೂ ಮುಂದುವರೆಸಿರುತ್ತದೆ. ಅದರಂತೆ ರಾಜ್ಯ

ಸರ್ಕಾರದ ಆದೇಶ ಸಂ. ಕಾಇ 71 ಸಿಎಲ್‌ಸಿ 2006, ದಿನಾಂಕ 29–3–2007 ಕ್ರಿಯಾ ಯೋಜನೆಯ ಅನುಷ್ಠಾನವನ್ನು 2011–12ನೇ ಸಾಲಿನವರೆಗೂ ಮುಮದುವರಿಸಿದೆ.

ಈ) ಬಾಲ ಕಾರ್ಮಿಕ ನಿರ್ಮೂಲನೆಗಾಗಿ ಸರ್ಕಾರವು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ:

ಕ್ರ. ಸಂ.	ವರ್ಷ	ಬಿಡುಗಡೆಯಾದ ಮೊತ್ತ
1	**2**	**3**
1.	2001–02	98 ಲಕ್ಷ
2.	2002–03	152 ಲಕ್ಷ
3.	2003–04	180.5 ಲಕ್ಷ
4.	2004–05	197.5 ಲಕ್ಷ
5.	2005–06	–
6.	2006–07	301 ಲಕ್ಷ
7.	2007–08	350 ಲಕ್ಷ
8.	2008–09	500 ಲಕ್ಷ
9.	2009–10	ಭಾಗಶಃ 112.5 ಲಕ್ಷ
	ಒಟ್ಟು	**1891.55 ಲಕ್ಷ**

ಉ) ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಕ್ರಿಯಾ ಯೋಜನೆಯನ್ನು 2001ರಲ್ಲಿ ರೂಪಿಸಿದ್ದು, ಅದನ್ನು ಕಾರ್ಯಗತ ಮಾಡಲಾಗುತ್ತಿದೆ. ಬಾಲ ಕಾರ್ಮಿಕರ ಪತ್ತೆಗಾಗಿ ಕಾರ್ಮಿಕ ಇಲಾಖೆಯು ತಂಡಗಳನ್ನು ರಚಿಸಿಕೊಂಡು, ತಿಂಗಳಿನಲ್ಲಿ ಒಂದು ವಾರ ರಾಜ್ಯಾದ್ಯಂತ ಹಠಾತ್ ದಾಳಿ ಕೈಗೊಂಡು, ಬಾಲ ಕಾರ್ಮಿಕರನ್ನು ಪತ್ತೆಹಚ್ಚಿ, ಕೆಲಸದಿಂದ ಬಿಡುಗಡೆಗೊಳಿಸಿ, ಮುಖ್ಯವಾಹಿನಿ ಶಾಲೆ ಅಥವಾ ಬಾಲ ಕಾರ್ಮಿಕ ವಿಶೇಷ ಶಾಲೆಗಳಲ್ಲಿ ಪುನರ್ವಸತಿಗೊಳಿಸಲಾಗುತ್ತಿದೆ. ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ಮಾಲೀಕರ ವಿರುದ್ಧ ಕಾಯ್ದೆ ಉಲ್ಲಂಘನೆಗಾಗಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುತ್ತಿದೆ. ಬಾಲ ಕಾರ್ಮಿಕನಿಗೆ ನೀಡುತ್ತಿರುವ ವೇತನವು ಸರ್ಕಾರವು ನಿಗದಿಪಡಿಸಿದ ಕನಿಷ್ಠ ವೇತನಕ್ಕಿಂತ ಕಡಿಮೆ ಇದ್ದರೆ, ವ್ಯತ್ಯಾಸದ ಮೊತ್ತಕ್ಕಾಗಿ ಪ್ರಾಧಿಕಾರಿಗಳ ಮುಂದೆ

ಅರ್ಜಿ ಸಲ್ಲಿಸಲಾಗುತ್ತಿದೆ. ಹೀಗೆ ಏಕಕಾಲದಲ್ಲಿ ಬಾಲ ಕಾರ್ಮಿಕರ ಪತ್ತೆ ಬಿಡುಗಡೆ, ಪುನರ್ವಸತಿ, ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತಿದೆ.

ಬಾಲ ಕಾರ್ಮಿಕರು ಅಪಾಯಕಾರಿ ಉದ್ದಿಮೆಯಲ್ಲಿ ಪತ್ತೆಯಾಗಿದ್ದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಜಿಲ್ಲಾಧಿಕಾರಿಗಳ ಕಾರ್ಪಸ್ ಫಂಡ್‌ಗೆ ಪ್ರತಿ ಬಾಲ ಕಾರ್ಮಿಕನಿಗೆ ರೂ. 20,000/– ರಂತೆ ಹಣ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬಾಲ ಕಾರ್ಮಿಕರನ್ನು ಬಾಲ ಕಾರ್ಮಿಕ ವಿಶೇಷ ವಸತಿ ಶಾಲೆಗಳಲ್ಲಿ ದಾಖಲಿಸಿದ್ದರೆ, ಅವರಿಗೆ 01 ವರ್ಷದಿಂದ 02 ವರ್ಷದವರೆಗೆ ಸೇತುಬಂಧ ಶಿಕ್ಷಣ ನೀಡಿ, ಮುಖ್ಯವಾಹಿನಿ ಶಾಲೆಗೆ ದಾಖಲು ಮಾಡಲಾಗುವುದು. ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ ವಸತಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ಊಟ, ವಸತಿ, ಸಮವಸ್ತ್ರ, ಶಿಕ್ಷಣ, ಆರೋಗ್ಯ ರಕ್ಷಣೆ ನೀಡಲಾಗುತ್ತಿದೆ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೇ, ಬಹಳ ಖೇದವಾಗುತ್ತದೆ. ಏಕೆಂದರೆ, ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆಂದು ರಾಜ್ಯ ಸರ್ಕಾರ 2001ರಲ್ಲಿ action plan ಒಂದನ್ನು ಮಾಡಿತ್ತು. ಕರ್ನಾಟಕ ರಾಜ್ಯವನ್ನು ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆಂದು ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು High Power Committeeಯನ್ನು constitute ಮಾಡಿದ್ದರು. ಆಗ ಮಾನ್ಯ ಹಿಂಡಸಗೇರಿಯವರು Labour and Wakf Minister ಆಗಿದ್ದರು. ಅಂದಿನ ಮಾನ್ಯ ಮುಖ್ಯಮಂತ್ರಿಗಳು 'The vision is to see Karnataka as a child labour free State. To achieve this Government have prepared an action plan, covering the activities of the several stake holders and assigning' ಎಂದು ಬಹಳ ಚೆನ್ನಾಗಿ action plan ಒಂದನ್ನು ಮಾಡಿತ್ತು. ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ 14 ವರ್ಷದ ಕೆಳಗಡೆ ಇರತಕ್ಕಂಥ ಶೇಕಡ 40ರಷ್ಟು ಮಕ್ಕಳಿದ್ದಾರೆ. ಬಹುಶಃ ಇವತ್ತು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರತಕ್ಕಂಥ ಮಕ್ಕಳು ಬಾಲ ಕಾರ್ಮಿಕ ರಾಗುತ್ತಿರುವುದನ್ನು ನಿಯಂತ್ರಣ ಮಾಡಲಿಕ್ಕೆ ರಾಜ್ಯ ಸರ್ಕಾರ 2007ನ್ನು target ಆಗಿ ಇಟ್ಟುಕೊಂಡಿತ್ತು. ಇವತ್ತು ಆ target ಅನ್ನು ಈಗ 2010–11ಕ್ಕೆ ಮುಂದೂಡಿದೆ. ಬಹುಶಃ ಇಚ್ಛಾಶಕ್ತಿಯ ಕೊರತೆ ರಾಜ್ಯ ಸರ್ಕಾರದಲ್ಲಿ ಎದ್ದು ಕಾಣುತ್ತಿದೆ. ನಾನು ಇಂದಿನ ಸಚಿವರು ಇದಕ್ಕೆ ಕಾರಣ ಎಂದು ಹೇಳುತ್ತಿಲ್ಲ. ಎಲ್ಲೋ ಒಂದು ಕಡೆ ಈ bureaucratic

set up ಅನ್ನು tune up ಮಾಡಬೇಕಾಗಿದೆ. ಇವತ್ತು ದಿನೇ ದಿನೇ ಬಾಲ ಕಾರ್ಮಿಕರು ಹೆಚ್ಚಾಗುತ್ತಿದ್ದಾರೆ. ಬಾಲ ಕಾರ್ಮಿಕರನ್ನು ಧೈರ್ಯವಾಗಿ ಕಾರ್ಖಾನೆಗಳು ಇರಬಹುದು, ಬೀಡಿ ಕಾರ್ಖಾನೆಗಳು ಇರಬಹುದು, ಗ್ಯಾರೇಜ್‌ಗಳಿರಬಹುದು, ಹೋಟೆಲ್‌ಗಳಿರ ಬಹುದು, ಯೂತ್ ಸೆಂಟರ್‌ಗಳಿರಬಹುದು ಅಥವಾ ಬೇರೆ ಬೇರೆ ಕಡೆಗಳಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ. ರೇಷ್ಮೆ ಇಲಾಖೆಯಲ್ಲಿ ಪುರ್ನವಸತಿ ಮಾಡಲಿಕ್ಕೆ 38 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ ಎನ್ನುವ ವರದಿಯನ್ನು ನೀವು ಕೊಟ್ಟಿದ್ದೀರಿ. 28 ಬಾಲ ಕಾರ್ಮಿಕರಿಗೆ 38 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ನನಗೆ ನಂಬಲರ್ಹ ಮೂಲಗಳಿಂದ ಬಂದಿರುವ ಪ್ರಕಾರ ಸುಮಾರು 40 ಸಾವಿರ ಬಾಲ ಕಾರ್ಮಿಕರು ಕೇವಲ ರೇಷ್ಮೆ ಇಲಾಖೆಯ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿರುವುದು ಗೊತ್ತಾಗುತ್ತದೆ. ನಾನು ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಏತಕ್ಕೋಸ್ಕರ ಮುಂದೂಡಲಾಗುತ್ತಿದೆ ಎಂಬುದಕ್ಕೆ ತಮ್ಮ ಉತ್ತರದಲ್ಲಿ ಕಾರಣಗಳನ್ನು ಕೊಟ್ಟಿದ್ದೀರಿ. ನನಗೆ ಬಹಳ ನೋವಾಗುತ್ತಿದೆ. ತಾವು ತಮ್ಮ ಉತ್ತರದಲ್ಲಿ 'ಭಾರತ ಸರ್ಕಾರವು ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ, 12ನೇ ಪಂಚ ವಾರ್ಷಿಕ ಅವಧಿ ಅಂದರೆ 2007–08ರಿಂದ 2011–12ನೇ ಸಾಲಿನವರೆಗೂ ಮುಂದುವರೆಸಿರುತ್ತದೆ' ಅದಕ್ಕೋಸ್ಕರ ಇದನ್ನು ನಾವೂ ಮುಂದೂಡುತ್ತಿದ್ದೇವೆಂದು ಹೇಳಿದ್ದೀರಿ. ನಾನು ಮಾನ್ಯ ಸಚಿವರಿಗೆ ಇದೊಂದು ಪ್ರಶ್ನೆಯನ್ನು ಕೇಳುತ್ತೇನೆ. High Power Committee ಎಷ್ಟು ಸಾರಿ ಸಭೆ ಸೇರಿದೆ? ಎಷ್ಟು ಸಲ review ಮಾಡಿದೆ? ಈ ಪಿಡುಗಿಗೆ ಇತಿಶ್ರೀ ಹಾಡಬೇಕಾಗುತ್ತದೆ. ಯಾವುದಾದರೂ ಒಂದು particular sector ತೆಗೆದುಕೊಂಡು ಅಲ್ಲಿ ಸಂಪೂರ್ಣವಾಗಿ ಈ ಪದ್ಧತಿ ನಿಲ್ಲಿಸಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, 'ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುವುದನ್ನು ಸಂಪೂರ್ಣವಾಗಿ ದಮನ ಮಾಡುತ್ತೇವೆ' ಎನ್ನುವಂತಹ ನಿಲುವನ್ನೇಕೆ ಸರ್ಕಾರ ತೆಗೆದುಕೊಳ್ಳಲಿಲ್ಲ? ಬೆಂಗಳೂರು ಸುತ್ತಮುತ್ತ ನನ್ನ ಗಮನಕ್ಕೆ ಬಂದಂತಹ ಪ್ರಕರಣಗಳಲ್ಲಿ, ಬಾಲ ಕಾರ್ಮಿಕರನ್ನು ಯಾರು ತೊಡಗಿಸಿಕೊಂಡಿರುತ್ತಾರೋ, ಅವರನ್ನು ಕರೆದು, ಅವರಿಗೆ ಕೇವಲ fine ಹಾಕಿ ನೀವು ಕಳುಹಿಸುತ್ತಿದ್ದೀರಿ. ಮತ್ತೆ ಅವನನ್ನು ಅದೇ ಹೋಟೆಲ್‌ನವನು ಕರೆದುಕೊಳ್ಳುತ್ತಾನೆ. ತಂದೆ ತಾಯಿಂದಿರು ಬಡತನಕೋ, ದುಡಿಮೆಗೋ ತಮ್ಮ ಮಕ್ಕಳನ್ನು ಕರೆದುಕೊಂಡು ಬಂದು ಬಿಡುತ್ತಾರೆ. ಇದರಿಂದಾಗಿ ರಾಜ್ಯದಲ್ಲಿ

ಬಾಲ ಕಾರ್ಮಿಕ ಪದ್ಧತಿಗೆ ಇತಿಶ್ರೀ ಹಾಡತಕ್ಕ ಪ್ರಯತ್ನ ಆಗುತ್ತಿಲ್ಲ. ರಾಜ್ಯದಲ್ಲಿ ಇತಿ ಮಿತಿ ಇರುವಂತಹ, ಬಾಲ ಕಾರ್ಮಿಕರ ಕಾಯ್ದೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಎಲ್ಲಾ ಕಲಂಗಳನ್ನು ಸಮಗ್ರವಾಗಿ ಏಕೆ ಬಳಸುತ್ತಿಲ್ಲ?

ಈ ಪಿಡುಗನ್ನು ತೊಡೆದು ಹಾಕುವುದಕ್ಕೆ ಸಮರೋಪಾದಿಯಲ್ಲಿ ಏನು ಕಾರ್ಯಕ್ರಮವನ್ನು ಮಾಡಿಕೊಂಡಿದ್ದೀರಿ. ನೀವು ಒಂದು ಕಡೆ wherever it is necessary Task Force constitute ಮಾಡುತ್ತೇವೆಂದು ಹೇಳಿದ್ದೀರಿ. ನೀವು Tast Force Constitute ಮಾಡುವುದು ಯಾವಾಗ? ಎಷ್ಟು ಸಭೆಗಳನ್ನು ಸೇರಿದ್ದೀರಿ? ಬಾಲ ಕಾರ್ಮಿಕರಿಂದ ಮುಕ್ತ ರಾಜ್ಯವನ್ನಾಗಿ ಮಾಡುವುದಕ್ಕೆ ಒಂದು ಗಂಭೀರವಾದ ಪ್ರಯತ್ನ ಏಕೆ ಮಾಡಲಿಲ್ಲ? ಶಾಸಕರ ವೇದಿಕೆಗಳ ಮುಖೇನ ಹಲವಾರು ಬಾರಿ ನಮ್ಮನ್ನೆಲ್ಲ ಕರೆದು ಸಭೆಯನ್ನು ಮಾಡಿದ್ದೀರಿ. ಅದರಲ್ಲಿ duties and responsibilities of various departments of Government of Karnataka in implementing the action plan for elimination of child labour ಎಂದು ಹೇಳಿದ್ದೀರಿ.

ಅಧ್ಯಕ್ಷರು: ನರೇಂದ್ರಬಾಬುರವರೇ, ನೀವು specific ಆಗಿ ಪ್ರಶ್ನೆಯನ್ನು ಕೇಳಿ.

ಶ್ರೀ ನೆ.ಲ. ನರೇಂದ್ರ ಬಾಬು: ಅವರು ಉತ್ತರ ಹೇಳಿರುವುದು, these are the lapses and failures.

ಅಧ್ಯಕ್ಷರು: ಅವರು ಉತ್ತರ ಏನು ಕೊಟ್ಟಿದ್ದಾರೆ, ಆ ಉತ್ತರ ನಿಮ್ಮ ಮುಂದೆ ಇದೆ. ಅದರಲ್ಲಿ ಏನಾದರೂ ಸ್ಪಷ್ಟೀಕರಣ ಬೇಕಿದ್ದಲ್ಲಿ specific ಆಗಿ ಪ್ರಶ್ನೆಯನ್ನು ಕೇಳುವುದಿದ್ದರೆ ಕೇಳಬಹುದು. ನೀವು ಬಜೆಟ್ ಮೇಲೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಉತ್ತರ ನಿಮ್ಮ ಮುಂದೆ ಇದೆ, ಅದರ ಮೇಲೆ ಕೊಟ್ಟಿರುವುದು ಸರಿಯಿಲ್ಲವೆಂದರೆ ಸರಿಯಿಲ್ಲವೆಂದು ಹೇಳಿ ಅಥವಾ ಅವರನ್ನು ಏನು ಮಾಡುತ್ತೀರೆಂದು ಕೇಳಿ.

ಶ್ರೀ ನೆ.ಲ. ನರೇಂದ್ರ ಬಾಬು: ನಾನು ಅದನ್ನೇ ಹೇಳುತ್ತಿದ್ದೇನೆ. ರಾಜ್ಯ ಸರ್ಕಾರದಲ್ಲಿ ಬಾಲ ಕಾರ್ಮಿಕ ಮುಕ್ತವನ್ನಾಗಿ ಮಾಡುವುದಕ್ಕೆ ಏಕೆ ಆಗುತ್ತಿಲ್ಲ. ಇಚ್ಛಾಶಕ್ತಿ ಕೊರತೆಯಿಂದಾಗಿ ಈ lapses ಆಗಿದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಹೈಪವರ್ ಕಮಿಟಿಯದು ಎಷ್ಟು ಮೀಟಿಂಗ್ ಆಗಿದೆ?

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆ ಮತ್ತು ಉತ್ತರ ಎರಡನ್ನು ಅವರೇ ಹೇಳುತ್ತಾರೆ. 14 ವರ್ಷದೊಳಗೆ ಉದ್ಯೋಗ

ಮಾಡುವಂತಹ ಬಾಲ ಕಾರ್ಮಿಕ ಪದ್ಧತಿ ಏನಿದೆ ಅದರಿಂದ ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ಕ್ರಿಯಾ ಯೋಜನೆ ಘೋಷಿಸಿದ್ದು, ಆ ಕ್ರಿಯಾ ಯೋಜನೆ ಮಾನ್ಯ ಎಸ್.ಎಂ. ಕೃಷ್ಣರವರು ಇದ್ದಂತಹ ಸಂದರ್ಭದಲ್ಲಿ 2007ಕ್ಕೆ ಮುಗಿಯಬೇಕು ಎಂದು ಆಯಿತು. ಆದರೆ ಕೇಂದ್ರ ಸರ್ಕಾರ ಈ ಅವಧಿಯನ್ನು 2011–12ಕ್ಕೆ ವಿಸ್ತರಣೆ ಮಾಡಿ ಆ ಸಮಯಕ್ಕೆ ಅದನ್ನು ಮುಕ್ತಾಯ ಮಾಡೋಣ ಎಂದು ತೀರ್ಮಾನ ಮಾಡಿಕೊಂಡರು. ಆದ್ದರಿಂದ ಇವತ್ತು ಬಾಲ ಕಾರ್ಮಿಕ ಪಿಡುಗು ಎಲ್ಲೂ ಇಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಹೇಳಬಹುದು. ನಮ್ಮಲ್ಲಿ Education Department, Labour Department, Health Department and Revenue Department ಈ ಎಲ್ಲಾ ಇಲಾಖೆಗಳು ಸೇರಿಕೊಂಡು ಪ್ರತಿ ತಿಂಗಳೂ ಒಂದು ವಾರ shops ನಲ್ಲಿ, Hotel ಗಳಲ್ಲಿ, ಡಾಬಾಗಳಲ್ಲಿ ಹಾಗೂ ಬೇರೆ ಬೇರೆ ಕಡೆ ಮಕ್ಕಳನ್ನು ಯಾರು ಇಟ್ಟುಕೊಂಡಿರುತ್ತಾರೆ ಎಂದು ಸರ್ವೆ ಮಾಡುತ್ತೇವೆ. ಬಡತನದಲ್ಲಿರುವವರು ಸಣ್ಣ ಮಕ್ಕಳಿಂದ ಕೆಲಸ ಮಾಡಿಸುವುದು ನಮಗೆ ನಿಮಗೆ ಗೊತ್ತಿದೆ. ಮಕ್ಕಳು construction areaದಲ್ಲಿ, garagesನಲ್ಲಿ ಕೆಲಸ ಮಾಡುತ್ತಿರುತ್ತಾರೆ. ತಂದೆಗಳು ಹೆಚ್ಚಾಗಿ ಮಕ್ಕಳನ್ನು ಬಳಸಿಕೊಳ್ಳುವ ರೂಢಿ ಇರುತ್ತದೆ, ಅದೊಂದು ನಮಗೆ ಅಡ್ಡ ಬರುತ್ತದೆ. ವಿಶೇಷವಾಗಿ ಅಲ್ಪಸಂಖ್ಯಾತರು ಅವರ garagesನಲ್ಲಿ, ಅವರು ದುಡಿಯುವ ಕಡೆ ಅವರ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಇವತ್ತು ದಾವಣಗೆರೆಯಲ್ಲಿ ಕಡ್ಲೆಪುರಿ ಬಟ್ಟಿಯಲ್ಲಿ ಸಣ್ಣಮಕ್ಕಳು ಕೆಲಸ ಮಾಡುತ್ತಾರೆ, ಅಲ್ಲಿ ಕೆಲಸಕ್ಕೆ ತೆಗೆದು ಕೊಂಡಿರುವವರನ್ನು ಹಿಡಿದಿದ್ದೇವೆ. ರಾಮಘಟ್ಟ, ಶಿಡ್ಲಘಟ್ಟ ಬೇರೆ ಬೇರೆ ಕಡೆ ರೇಷ್ಮೆ ರೀಲರ್ಸ್ ಘಟಕದಲ್ಲಿ ರೇಷ್ಮೆ ದಾರವನ್ನು ಸುತ್ತುವ ಕೆಲಸಕ್ಕೆ ಮಕ್ಕಳನ್ನು ಬಳಸಿಕೊಳ್ಳುವುದು ಇದೆ. ಟಾರ್ ಹಾಕುವ ಕಡೆ ರಸ್ತೆ ಕೆಲಸಕ್ಕೆ ಮಕ್ಕಳನ್ನು ಬಳಸಿಕೊಳ್ಳುವುದು ಇಂತಹ ಕಡೆ ಕಂಡು ಹಿಡಿದಿದ್ದೇವೆ. ಬೇಕಾದಷ್ಟು ಕಡೆ ನಡೆಯುತ್ತಿವೆ, ಆದರೆ ಎಲ್ಲಾ ಮಾಡಿದ್ದೇವೆ ಎಂದು ಹೇಳುವುದಿಲ್ಲ. ನಮಗೆ ಸಾರ್ವಜನಿಕರ ಸಹಕಾರ ಇದೆ, NGO ಗಳು ಕೂಡ ನಮಗೆ ಹೇಳುತ್ತಾರೆ. ಆ ಮಕ್ಕಳಿಗೆ ಪುನರ್‌ವಸತಿ ಕಾರ್ಯವನ್ನು ಕಲ್ಪಿಸುವ ಕಾರ್ಯವನ್ನು ಮಾಡುತ್ತಿದ್ದೇವೆ. ಅವರಿಗೆ Education Institutions ಮಾಡುತ್ತಿದ್ದೇವೆ. ರಾಜ್ಯ ಸರ್ಕಾರ ಇವತ್ತು ಆ ಮಕ್ಕಳಿಗೆ ಶಾಲೆಗಳನ್ನು ತೆರೆಯುವ ದೃಷ್ಟಿಯಿಂದ ಬೇಕಾದಷ್ಟು ಹಣವನ್ನು ನಮಗೆ ಕೊಟ್ಟಿದೆ. ನಾವು ಜಿಲ್ಲಾಧಿಕಾರಿಗಳ ಮೂಲಕ day schools ಮತ್ತು ವಸತಿ ಶಾಲೆಗಳನ್ನು ಈ

ಎರಡು ಶಾಲೆಗಳನ್ನು ಮಾಡುವಂತಹ ಅವಕಾಶಗಳನ್ನು ನಾವು ಮಾಡಿಕೊಂಡಿದ್ದೇವೆ. ಇವತ್ತು day schools 2001ರಲ್ಲಿ ತನಿಖೆ ಪ್ರಕಾರ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳು ಮತ್ತು ರಾಷ್ಟ್ರೀಯ ಬಾಲ ಕಾರ್ಮಿಕರ ಕ್ರಿಯಾ ಯೋಜನೆಯಲ್ಲಿ ಕೇಂದ್ರ ಸರ್ಕಾರವು 15 ಜಿಲ್ಲೆಗಳಲ್ಲಿ 387 ಶಾಲೆಗಳನ್ನು ಮಂಜೂರು ಮಾಡಿದೆ. ಈ ಪೈಕಿ ಹಾಲಿ 294 ಶಾಲೆಗಳು ಕೆಲಸ ನಿರ್ವಹಿಸುತ್ತಿವೆ. 13,922 ಮಕ್ಕಳನ್ನು ಪುನರ್ ವಸತಿಗೆ ಕಲ್ಪಿಸಿ ಮುಖ್ಯವಾಹಿನಿಗೆ ತರಲಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿರುವ ಮಕ್ಕಳ ಸಂಖ್ಯೆ ಎಷ್ಟಿದೆ ಎಂದು ನಾವು ಸರ್ವೇ ಮಾಡಿಲ್ಲ. ಇದನ್ನು ಸರ್ವೆ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರ ಸರ್ವೆ ಮಾಡುತ್ತೇವೆಂದು ಹೇಳಿದ್ದು, ಯಾರೂ ಕೂಡ ಇನ್ನು ಮಾಡಿಲ್ಲ. ಬಾಲ ಕಾರ್ಮಿಕರ ಸರ್ವೆ ಕಾರ್ಯ ಈ ರಾಜ್ಯದಲ್ಲಿ ಇನ್ನೂ ಆಗಿಲ್ಲ. ಆ ಸರ್ವೆ ಕಾರ್ಯವನ್ನು ಮುಂದಿನ ದಿನಗಳಲ್ಲಿ ಮಾಡೋಣ ಎಂದು ಹೇಳಿದ್ದಾರೆ. ಐಜಾಕ್ ಕಮಿಟಿ ರಿಪೋರ್ಟ್ ಮಾಡಿದೆ, ತಾವು ಏಕೆ ತಡ ಮಾಡುತ್ತಿದ್ದೀರಿ ಎಂದು ತಾವು ಇನ್ನೊಂದು ವಿಚಾರ ಕೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟ ಹಾಗೆ ನಮ್ಮ Additional Chief Secretaryಯವರು ಏನು ಮಾಡಬೇಕೆಂದು ಈಗಾಗಲೇ ಸಭೆಯನ್ನು ಕರೆದಿದ್ದಾರೆ. International Labour Organization also suggested some norms. ಇದನ್ನೆಲ್ಲ ತೆಗೆದುಕೊಂಡು ನಮ್ಮ ರಾಜ್ಯ ಮತ್ತು ಕೇಂದ್ರ ಎರಡೂ ಸೇರಿ ಈ ಒಂದು ಪಿಡುಗಿಗೆ socio-economic change ತರುವ ದೃಷ್ಟಿಯಿಂದ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಿದ್ದೇವೆ. 20,000 ಜುಲ್ಮಾನೆ ಹಾಕುತ್ತೇವೆ, prosecution ಮಾಡಿದ್ದೇವೆ. ಕೋಟ್ಯಾಂತರ ರೂಪಾಯಿ ಹಣ ಇವತ್ತು ಜಿಲ್ಲಾಧಿಕಾರಿಗಳಿಗೆ ಬಂದಿದೆ. ಯಾರು ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತಾರೆ ಅವರ ಹತ್ತಿರ 20,000 ರೂಪಾಯಿ ವಸೂಲಿ ಮಾಡಿ, ಅದನ್ನು ಆ ಮಗುವಿನ fundಗೆ ಹಾಕುತ್ತೇವೆ. ಬಾಲ ಕಾರ್ಮಿಕರು ಕೆಲಸದಲ್ಲಿ ತೊಡಗಿರುವವರು 2001ರಲ್ಲಿ 8,848, 2002ರಲ್ಲಿ 9,859, 2003ರಲ್ಲಿ 11,932, 2004ರಲ್ಲಿ 9,177, 2005ರಲ್ಲಿ 14,488, 2006ರಲ್ಲಿ 13,962, 2007ರಲ್ಲಿ 16,000, 2008ರಲ್ಲಿ 6,215 it has come down now. ಅದು ಕೆಳಗೆ ಇಳಿಯುತ್ತಿದೆ. ಇವತ್ತು ಯಾರೂ ಬೇಕಾದರೂ ನಮ್ಮ ಇಲಾಖೆಗೆ complaint ಕೊಡಬಹುದು ಅಥವಾ ತಿಳಿಸಬಹುದು. ಅವರು ಯಾರೇ ಆಗಿರಲಿ ಅವರನ್ನು ಹಿಡಿದುಕೊಳ್ಳುತ್ತಾರೆ. ಹೆಚ್ಚು ಬಾಲ ಕಾರ್ಮಿಕರು ಇದ್ದಾರೆ, ನಗರಗಳಲ್ಲಿ ಮನೆಗಳಲ್ಲಿ ಹಾಗೂ

ಹಳ್ಳಿಗಳಲ್ಲಿ ವ್ಯವಸಾಯ ಮಾಡಿಕೊಂಡು ತಂದೆ ತಾಯಿಯರಿಗೆ ಸಪೋರ್ಟ್ ಮಾಡುವುದಕ್ಕೆ ಇಟ್ಟುಕೊಂಡು ದುಡಿಸಿ ಕೊಳ್ಳುವವರು ಇದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅವರು ಮಕ್ಕಳನ್ನು ಬಿಟ್ಟು ಕೊಡುವುದಿಲ್ಲ. ಆ ದೃಷ್ಟಿಯಿಂದ ನಾವು ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿ ನಾವು ಸಮರ್ಪಕವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ತಾವು ಈಗಾಗಲೇ ನನ್ನ ಹತ್ತಿರ ಅನೇಕ ಬಾರಿ ಮಾತನಾಡಿದ್ದೀರಿ. ಯಾವ ರೀತಿ ಮಾಡಬೇಕೆಂದು ತಾವು suggestions ಕೊಡುತ್ತೀರಿ, I always welcome you.

ಶ್ರೀ ನೆ.ಲ. ನರೇಂದ್ರ ಬಾಬು: ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಬಾಲ ಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡಬೇಕೆನ್ನುವುದು postpone ಮಾಡಿ ಮುಂದಕ್ಕೆ ಹೋಗಿದೆ. ಆದರೆ ನನ್ನ ಆಸೆ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ: ನಮ್ಮ ರಾಜ್ಯ ಮಾತ್ರ ಅಲ್ಲ. ನಾವು ಮತ್ತು ಕೇಂದ್ರ ಸರ್ಕಾರ ಸೇರಿ ಜಂಟಿಯಾಗಿ 2011–12ರವರೆಗೆ ವಿಸ್ತರಣೆ ಮಾಡಿದೆ. It is in the Concurrent List.

ಶ್ರೀ ನೆ.ಲ. ನರೇಂದ್ರ ಬಾಬು: ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖೇನ ವಿನಂತಿ ಮಾಡುವುದೇನೆಂದರೆ ನಮ್ಮಲ್ಲಿ administrative laws lapse ಏನಿವೆ, ಅವು effective ಆಗಿ ಕೆಲಸ ಮಾಡಿದರೆ ಒಳ್ಳೆಯದು. ಎಷ್ಟು ಜನ ಅಧಿಕಾರಿಗಳ ಮನೆಯಲ್ಲಿ ಬಾಲ ಕಾರ್ಮಿಕರು ಇದ್ದಾರೆಂದು ಗೊತ್ತಾಗುತ್ತದೆ. ಬೆಳಿಗ್ಗೆ ಹೊತ್ತು ಹೋದರೆ ರಿಂಗ್ ರೋಡ್‌ಗಳಲ್ಲಿ ಕಸ ಗುಡಿಸುತ್ತಿರುತ್ತಾರೆ. ಯಾರು ಕೆಲಸ ಮಾಡಬೇಕು ಎಂದು ಗೊತ್ತಾಗುತ್ತದೆ. ಮೊದಲೇ ಮುಂಜಾಗ್ರತೆಯಿಂದ effective ಆಗಿ adminstrative law ಗಳನ್ನು ತೆಗೆದುಕೊಳ್ಳಬೇಕು ಅದನ್ನು ಹಾಗೆ ತೆಗೆದುಕೊಂಡರೆ ಆಗುವುದಿಲ್ಲ. ಅದಕ್ಕೆ prevention is better than cure ಎಂದು ಹೇಳುತ್ತಾರೆ. ಅದಕ್ಕೆ ಅಪರಾಧ ಆದ ಮೇಲೆ 20,000 ದಂಡ ಹಾಕುವುದಲ್ಲ. ನಾನು ಒಂದು ವಿನಂತಿ ಮಾಡುತ್ತೇನೆ, ನನ್ನ ಕ್ಷೇತ್ರವನ್ನು ಬಾಲ ಕಾರ್ಮಿಕ ಮುಕ್ತ ಕ್ಷೇತ್ರವನ್ನಾಗಿ ಮಾಡಬೇಕೆಂದು ಇದೆ. ನೀವು ಸಹಕಾರ ಕೊಡಬೇಕು. ಅದಕ್ಕೆ ಸರ್ಕಾರ ಸಂಪೂರ್ಣವಾಗಿ ನನ್ನ ಜೊತೆ ನಿಂತು ಕೊಂಡರೆ ನನ್ನ ಕ್ಷೇತ್ರವನ್ನು ಮಾಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ನರೇಂದ್ರ ಬಾಬುರವರು ದಯವಿಟ್ಟು ಒಂದು ಕ್ಷೇತ್ರಕ್ಕೆ ಸೀಮಿತವಾಗಬೇಡಿ. ಅವರು ನನ್ನ

ಕ್ಷೇತ್ರವನ್ನು ಬಾಲ ಕಾರ್ಮಿಕ ಮುಕ್ತವನ್ನಾಗಿ ಮಾಡಿ ಎಂದು ಹೇಳಿದರು. ನಾವು ರಾಜ್ಯಕ್ಕೆ ಸೀಮಿತವಾಗಿ ಮಾತನಾಡೋಣ, ತಮ್ಮ ಸಲಹೆಗಳನ್ನು ತೆಗೆದುಕೊಂಡು ರಾಜ್ಯ ಮಟ್ಟದಲ್ಲಿ ಮಾಡೋಣ. Concurrent List ಇದ್ದರೂ ಕೂಡ ಅವರಿಗಿಂತ ಮುಂದಾಗಿ ಮುಕ್ತ ರಾಜ್ಯವನ್ನಾಗಿ ಮಾಡುವ ಕಾರ್ಯವನ್ನು ನಾವು ಮಾಡೋಣ.

ಅಧ್ಯಕ್ಷರು: ಒಂದು announcement. The Members of Bavaria delegaton headed by Mrs. Emilia Muller, Hon'ble State Minister for Federal and European Affairs are now witnessing the proceedings of this August House from the Speaker's Gallery. On behalf of the Hon'ble Members of this House, I welcome them.

ಬಸವಕಲ್ಯಾಣದಲ್ಲಿ ಹೊಸ ಹಾಸ್ಟೆಲ್‌ಗಳನ್ನು ಮಂಜೂರು ಮಾಡುವ ಕುರಿತು

1203 ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಹಿಂದುಳಿದಿರುವ ಅಲ್ಪಸಂಖ್ಯಾತರ ಬಿಸಿಎಂ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು; ಬಸವಕಲ್ಯಾಣವು ಉಪ ವಿಭಾಗವಾಗಿದ್ದು, ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದರಿಂದ ಬಸವಕಲ್ಯಾಣಕ್ಕೆ ಹೊಸದಾಗಿ ಬಿಸಿಎಂ ಹಾಸ್ಟೆಲ್‌ಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುವುದೇ;

ಆ) ಈ ಮತಕ್ಷೇತ್ರದಲ್ಲಿ ಇರುವ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ನಿಗಿದಿತ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ, ಈ ವಿದ್ಯಾರ್ಥಿ ನಿಲಯಗಳನ್ನು ಮೇಲ್ದರ್ಜೆಗೆ ಏರಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು)

ಅ) ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಒಟ್ಟು 15 ಹಾಗೂ ಅಲ್ಪಸಂಖ್ಯಾತರ 1 ವಿದ್ಯಾರ್ಥಿನಿಲಯ ಇರುತ್ತವೆ.

ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.